
# ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್-585226

भाकृअनुप ICAR




## ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, (ದ.ಕ.)

# ಕೃಷಿ ಸಂಜೀವಿನಿ






e-mail: kvk.DakshinaKannada@icar.gov.in, kvkdk@rediffmail.com, kvkdkmlr@gmail.com, Web: kvkdk.org

ದೂರವಾಣಿ ಸಂಖ್ಯೆ: 0824: 2431872, 8762543060



ಸಂಚಿಕೆ: 02 | ಎಪ್ರಿಲ್–ಜೂನ್ 2023 | ಇ–ವಾರ್ತಾ ಪತ್ರಿಕೆ | ಸಂಪುಟ–2


## ನಮ್ಮ ಕುಡ್ಲ ವಾಹಿನಿಯಲ್ಲಿ ಕಲ್ಲಂಗಡಿ ಹಣ್ಣಿನ ಬೇಸಾಯ ಕುರಿತು ನೇರ ಪ್ರಸಾರ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ದಿನಾಂಕ:19–04–2023 ರಂದು ಮಂಗಳೂರಿನ ನಮ್ಮ ಕುಡ್ಲ ವಾಹಿನಿಯ ಕಲ್ಲಂಗಡಿ ಹಣ್ಣಿನ ಬೇಸಾಯ ಕುರಿತು ನೇರ ಪ್ರಸಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು.




## ಕ್ಷೇತ್ರೋತ್ಸವ– ಅಲಸಂದೆ(ಅರ್ಕ ಮಂಗಳ)

ಭಾ. ಕೃ. ಅ. ಪ.–ಕೃಷಿ ವಿಜ್ಞಾನ ಕೇಂದ್ರ (ದ.ಕ.) ಮಂಗಳೂರು ವತಿಯಿಂದ 21–04–2023 ರಂದು ಬೆಳ್ತಂಗಡಿ ತಾಲೂಕಿನ ಹೊಸಂಗಡಿ ಗ್ರಾಮದಲ್ಲಿ ಅಧಿಕ ಇಳುವರಿ ಕೊಡುವ ಮೀಟರ್ ಅಲಸಂದೆಯ ಅರ್ಕ ಮಂಗಳ ತಳಿಯ ಮುಂಚೂಣಿ ಪ್ರಾತ್ಯಕ್ಷಿಕೆ ಅಡಿಯಲ್ಲಿ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಅರ್ಕ ಮಂಗಳ ತಳಿಯ ಬಗ್ಗೆ ಮಾಹಿತಿ ನೀಡಿದರು. ಡಾ. ಕೇದಾರನಾಥ, ಸಸ್ಯ ಸಂರಕ್ಷಣೆ ವಿಜ್ಞಾನಿ ಕೀಟ ಮತ್ತು ರೋಗಗಳ ಸುಸ್ಥಿರ ಮತ್ತು ಪರಿಣಾಮಕಾರಿ ನಿರ್ವಹಣೆಗಾಗಿ ಸಸ್ಯ ಸಂರಕ್ಷಣಾ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಶ್ರೀ ಜೆರೋಮಿಯಾಸ್ ಮೊರಾಸ್, ಪ್ರಗತಿಪರ ಕೃಷಿಕರು ಅರ್ಕ ಮಂಗಳ ತಳಿಯು ಅತ್ಯುತ್ತಮವಾದ ಜೀವಿತಾವಧಿಯನ್ನು ಹೊಂದಿದೆ, ಸ್ಥಳೀಯ ತಳಿಗಳಿಗೆ ಹೋಲಿಸಿದರೆ ಕಾಯಿಗಳು ಉದ್ದವಾಗಿ ಮತ್ತು ನೇರವಾಗಿರುವುದರಿಂದ ಗೊಂಚಲು ಮಾಡಲು ಸುಲಭವಾಗುತ್ತದೆಂದು ತಳಿಯ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಪೆರಾಡಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಶ್ರೀ. ಹರಿಪ್ರಸಾದ್, ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ಬಿಎಸ್‌ಡಬ್ಲ್ಯೂ ವಿದ್ಯಾರ್ಥಿಗಳು ಮತ್ತು ರೈತರು ಉಪಸ್ಥಿತರಿದ್ದರು




## ನಮ್ಮ ಕುಡ್ಲ ವಾಹಿನಿಯಲ್ಲಿ ಅನಾನಸ್ ಬೇಸಾಯ ಕುರಿತು ನೇರ ಪ್ರಸಾರ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ದಿನಾಂಕ:26–04–2023 ರಂದು ಮಂಗಳೂರಿನ ನಮ್ಮ ಕುಡ್ಲ ವಾಹಿನಿಯ ಅನಾನಸ್ ಬೇಸಾಯ ಕುರಿತು ನೇರ ಪ್ರಸಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು.





## ಮಣ್ಣು ಪರೀಕ್ಷೆಯ ಮಹತ್ವ ಮತ್ತು ಮಣ್ಣಿನ ಮಾದರಿ ಸಂಗ್ರಹಣೆಯ ವಿಧಾನದ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡದಿಂದ 'ಮಣ್ಣು ಪರೀಕ್ಷೆಯ ಮಹತ್ವ ಮತ್ತು ಮಣ್ಣಿನ ಮಾದರಿ ಸಂಗ್ರಹಣೆಯ ವಿಧಾನ' ಕುರಿತು ಮಂಗಳೂರಿನ ಮೀನುಗಾರಿಕಾ ಕಾಲೇಜಿನ ವಿದ್ಯಾರ್ಥಿಗಳಿಗೆ ಒಂದು ದಿನದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ದಿನಾಂಕ 15.05.2023 ರಂದು ಆಯೋಜಿಸಲಾಯಿತು. ಕಾರ್ಯಕ್ರಮದ ಸಂಯೋಜಕರಾದ ಡಾ. ಮಲ್ಲಿಕಾರ್ಜುನ ಎಲ್ ವಿಜ್ಞಾನಿ (ಮಣ್ಣು ವಿಜ್ಞಾನ) ಮಾತನಾಡಿ, ಮಣ್ಣಿನ ಪರೀಕ್ಷೆಯು ಬೆಳೆ ಉತ್ಪಾದನೆಯನ್ನು ಉತ್ತಮಗೊಳಿಸಲು, ಹೆಚ್ಚಿನ ರಸಗೊಬ್ಬರಗಳ ಬಳಕೆ ಮತ್ತು ಸೋರಿಕೆಯಿಂದ ಪರಿಸರವನ್ನು ಮಾಲಿನ್ಯದಿಂದ ರಕ್ಷಿಸಲು, ಸಸ್ಯ ಬೆಳವಣಿಗೆಯ ಸಮಸ್ಯೆಗಳ ನಿರ್ಣಯದಲ್ಲಿ ಸಹಾಯ ಮಾಡಲು, ಮಣ್ಣಿನ ಪೋಷಕಾಂಶಗಳ ಸಮತೋಲನವನ್ನು ಸುಧಾರಿಸಲು ಮತ್ತು ಉಳಿಸಲು, ಅಗತ್ಯವಿರುವಷ್ಟು ಮಾತ್ರ ರಸಗೊಬ್ಬರವನ್ನು ಬಳಸುವ ಮೂಲಕ ಖರ್ಚನ್ನು ಮಿತಗೊಳಿಸಿ ಸುಸ್ಥಿರ ಕೃಷಿಯನ್ನು ಸಾಧಿಸಲು ಮಣ್ಣಿನ ಪರೀಕ್ಷೆ ಸಹಕಾರಿಯಾಗಿದೆ. ಆದ್ದರಿಂದ ಕೃಷಿಯಲ್ಲಿ ಸುಸ್ಥಿರ ಇಳುವರಿಯನ್ನು ಸಾಧಿಸಲು ಭೂಮಿಯ ಮೇಲಿನ ಫಲವತ್ತಾದ ಮಣ್ಣಿನ ಸಂರಕ್ಷಣೆ ಹಾಗೂ ಮಣ್ಣು ಪರೀಕ್ಷೆಯ ಅಳವಡಿಕೆಯು ಅವಶ್ಯಕವಾಗಿದೆ ಎಂದು ತಿಳಿಸಿದರು. ನಂತರ ಭತ್ತದ ಗದ್ದೆಯಲ್ಲಿ ಮಣ್ಣಿನ ಮಾದರಿ ಸಂಗ್ರಹಣೆಯ ವಿಧಾನವನ್ನು ಸಹ ವಿದ್ಯಾರ್ಥಿಗಳಿಗೆ ಪ್ರದರ್ಶಿಸಿದರು. ಈ ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕ ಡಾ. ಅಣ್ಣಪ್ಪ ಸ್ವಾಮಿ, ಕೇಂದ್ರದ ಸಿಬ್ಬಂದಿಗಳು ಹಾಗೂ 37 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




ಜಮೀನಿನಲ್ಲಿ ಮಣ್ಣಿನ ಮಾದರಿ ವಿಧಾನದ ಪ್ರಾತ್ಯಕ್ಷಿಕೆ



## ಆಕಾಶವಾಣಿ, ಮಂಗಳೂರು ಬಾನುಲಿ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ದಿನಾಂಕ:19–05–2023 ರಂದು ಆಕಾಶವಾಣಿ, ಮಂಗಳೂರು ಬಾನುಲಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಕೈತೋಟ ಮತ್ತು ತಾರಸಿ ತೋಟದ ಬಗ್ಗೆ ಮಾಹಿತಿಯನ್ನು ನೀಡಿದರು.




## ವೈಜ್ಞಾನಿಕ ಭತ್ತದ ಕೃಷಿಯಲ್ಲಿ ರಸಗೊಬ್ಬರ ನಿರ್ವಹಣೆ

ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬೆಳ್ತಂಗಡಿಯ ಸಹಯೋಗದೊಂದಿಗೆ ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರವು ವೈಜ್ಞಾನಿಕ ಭತ್ತದ ಕೃಷಿಯಲ್ಲಿ ರಸಗೊಬ್ಬರ ನಿರ್ವಹಣೆ' ಕುರಿತು 20.05.2023 ರಂದು ಅಂತರ್ಜಾಲ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು. ಡಾ. ಮಲ್ಲಿಕಾರ್ಜುನ ಎಲ್. ವಿಜ್ಞಾನಿ (ಮಣ್ಣು ವಿಜ್ಞಾನ) ಅವರು ಪ್ರಸ್ತಿತಿಯಲ್ಲಿ ರಸಗೊಬ್ಬರಗಳ ಸಮತೋಲಿತ ಬಳಕೆ, ಮಣ್ಣಿನ ಆರೋಗ್ಯ ಸುಧಾರಿಸಲು ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಅಗತ್ಯತೆ, ಹೆಚ್ಚಿನ ಇಳುವರಿ ಪಡೆಯಲು ರಸಗೊಬ್ಬರವನ್ನು ಬಳಸುವ ವಿಧಾನ ಮತ್ತು ಸಮಯಕ್ಕೆ ಸಂಬಂಧಿಸಿದ ಅಂಶಗಳನ್ನು ವಿವರಿಸಿದರು. ಸಸ್ಯಗಳ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳು ಭೂಮಿಯಲ್ಲಿ ಖಾಲಿಯಾದ ನಂತರ ಮಣ್ಣಿಗೆ ಮರುಪೂರೈಸಲು ರಸಗೊಬ್ಬರಗಳನ್ನು ಉಪಯೋಗಿಸಲಾಗುತ್ತದೆ. ಹೆಚ್ಚಿನ ಪ್ರಮಾಣದ ರಸಗೊಬ್ಬರಗಳು ಸಾಮಾನ್ಯವಾಗಿ ಮೇಲ್ಮೈ ಹರಿವು ಮತ್ತು ಕೃಷಿ ಭೂಮಿಯಿಂದ ಸೋರಿಕೆಯಾಗಿ ನೀರಿನ ಮೂಲಗಳನ್ನು ಪ್ರವೇಶಿಸಿ ಪರಿಸರ ಮಾಲಿನ್ಯ ಸೃಷ್ಟಿಸಬಹುದು. ಈ ನಿಟ್ಟಿನಲ್ಲಿ ಪೋಷಕಾಂಶಗಳ ಅಗತ್ಯತೆ ಆಧಾರದ ಮೇಲೆ ರಸಗೊಬ್ಬರಗಳ ಪೂರೈಕೆ ಹಾಗೂ ಅವುಗಳ ಸರಿಯಾದ ನಿರ್ವಹಣೆಯಿಂದ ಪರಿಸರದ ರಕ್ಷಣೆಯೊಂದಿಗೆ ಹೆಚ್ಚಿನ ಇಳುವರಿಯನ್ನು ಪಡೆಯಬಹುದು ಎಂದು ರೈತರಿಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀಮತಿ ಶೈಲಜಾ ಎ ಎಸ್ ಹಾಗೂ ಜಿಲ್ಲೆಯ ವಿವಿಧೆಡೆಯಿಂದ 28 ರೈತರು ಭಾಗವಹಿಸಿದ್ದರು.




## ಪರಿಸರ ಸ್ನೇಹಿ ಜೀವನಶೈಲಿ: ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿ

ಭಾ.ಕೃ.ಅ.ಪ– ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಹಾಗೂ ಭಾರತೀಯ ವಿಕಾಸ ಟ್ರಸ್ಟ್, ಮಣಿಪಾಲ ಇದರ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ 22 ರಿಂದ 28 ಮೇ 2023 ರ ವರೆಗೆ ಕೃಷಿ ಇಲಾಖೆ ಮತ್ತು ರೈತರ ಕಲ್ಯಾಣ ನಿರ್ದೇಶನಾಲಯಗಳ ಮಿಷನ್ ಲೈಫ್‌ನ ನಿರ್ದೇಶನದಂತೆ ಪರಿಸರ ಸ್ನೇಹಿ ಜೀವನಶೈಲಿ: ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿ ಎಂಬ ವಿಷಯವಾಗಿ ಒಂದು ವಾರದ ಅಭಿಯಾನವನ್ನು ಆಯೋಜಿಸಲಾಯಿತು.




ತುಂಬೆಯ ಬಿಎ ಐಟಿಐ ತರಬೇತಿ ಸಂಸ್ಥೆಯಲ್ಲಿ 23.05.2023 ರಂದು ಪರಿಸರ ಸ್ನೇಹಿ ಜೀವನಶೈಲಿಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ನವೀನ್ ಕುಮಾರ್ ಕೆ.ಎಸ್. ಪ್ರಾಂಶುಪಾಲರು, ತುಂಬೆ ಬಿಎ ಐಟಿಐ ತರಬೇತಿ ಸಂಸ್ಥೆ, ಪೂರ್ವಭಾವಿಯಾಗಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಸಂಯೋಜಕರಾದ ಡಾ. ಮಲ್ಲಿಕಾರ್ಜುನ ಎಲ್ ವಿಜ್ಞಾನಿ (ಮಣ್ಣು ವಿಜ್ಞಾನ) ಉತ್ತಮ ಪರಿಸರಕ್ಕಾಗಿ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಮತ್ತು ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳಲು ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿಯ ಅಳವಡಿಕೆಯ ಅಗತ್ಯತೆಯ ಬಗ್ಗೆ ಮಾತನಾಡಿದರು. ತುಂಬೆ ಬಿಎ ಐಟಿಐ ತರಬೇತಿ ಸಂಸ್ಥೆಯ ತರಬೇತಿ ಅಧಿಕಾರಿ ರಾಜೇಶ್ ಟಿ ಸ್ವಾಗತಿಸಿದರು, ಮಣಿಪಾಲದ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಿಬ್ಬಂದಿಗಳು ಹಾಗೂ 67 ವಿದ್ಯಾರ್ಥಿಗಳು ಭಾಗವಹಿಸಿದ್ದರು.





ಸುದ್ದಿ Live

ಬಿ.ಎ ಐಟಿಐ ತುಂಬೆ: ಪರಿಸರ ಜಾಗೃತಿ ಕಾರ್ಯಕ್ರಮ

May 26, 2023

ಪುತ್ತೂರು : ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ, ಕೃಷಿ ವಿಜ್ಞಾನ ಕೇಂದ್ರ, (ದ.ಕ) ಮಂಗಳೂರು ಮತ್ತು ರಾಷ್ಟ್ರೀಯ ಸೇವಾ ಯೋಜನೆ ಬಿ.ಎ ಕೈಗಾರಿಕಾ ತರಬೇತಿ ತುಂಬೆ ಇವುಗಳ ಸಂಯುಕ್ತಆಶ್ರಯದಲ್ಲಿ ವಿದ್ಯಾರ್ಥಿಗಳಿಗಾಗಿ "ಪರಿಸರ ಸ್ನೇಹಿ ಜೀವನ ಶೈಲಿ" ಎಂಬ ಕಾರ್ಯಕ್ರಮ ಮೇ.23 ಬಿ.ಎ ಐಟಿಐ ತುಂಬೆಯಲ್ಲಿ ನಡೆಯಿತು.

ಬಿಎ ಐಟಿಐ, ತರಬೇತಿ ಸಂಸ್ಥೆ, ತುಂಬೆಯಲ್ಲಿ ವಿಚಾರ ಸಂಕಿರಣವನ್ನು ಪ್ರಸ್ತುತಪಡಿಸಲಾಯಿತು ಹಾಗೂ ಕಾರ್ಯಕ್ರಮದ ಕುರಿತು ಸ್ಥಳೀಯ ಪತ್ರಿಕೆಯಲ್ಲಿ ಸುದ್ದಿ ಪ್ರಸಾರ



ದಿನಾಂಕ 24.05.2023 ಮೂಡಬಿದ್ರೆ ತಾಲೂಕಿನ ಶಿರ್ತಾಡಿ ಗ್ರಾಮದಲ್ಲಿ ಪರಿಸರ ಸ್ನೇಹಿ ಜೀವನಶೈಲಿ: ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿ ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ನೇತೃತ್ವವನ್ನು ಶ್ರೀ ತುಳಸಿ ಮಹಿಳಾ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಜಯಂತಿ ರವರು ವಹಿಸಿದ್ದರು. ಮಣಿಪಾಲದ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ ಪ್ರಾಸ್ತಾವಿಕವಾಗಿ ಕಾರ್ಯಕ್ರಮದ ಕುರಿತು ಮಾತನಾಡಿದರು. ಡಾ. ಮಲ್ಲಿಕಾರ್ಜುನ ಎಲ್ ವಿಜ್ಞಾನಿ (ಮಣ್ಣು ವಿಜ್ಞಾನ) ಕಾರ್ಯಕ್ರಮವನ್ನು ಸಂಯೋಜಿಸಿ, ರೈತರೊಂದಿಗಿನ ಸಂವಾದದಲ್ಲಿ ಭಾರತೀಯ ಹವಾಮಾನ ಇಲಾಖೆ, ಭೂ ವಿಜ್ಞಾನ ಸಚಿವಾಲಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐ.ಸಿ.ಎ.ಆರ್) ಮತ್ತು ಇತರ ಸಂಸ್ಥೆಗಳ ಸಹಯೋಗದೊಂದಿಗೆ ಜಿಲ್ಲೆ/ಬ್ಲಾಕ್ ಮಟ್ಟದ ಕೃಷಿ ಹವಾಮಾನ ಸಲಹಾ ಸೇವೆಗಳನ್ನು (ಎಎಎಸ್) "ಗ್ರಾಮೀಣ ಕೃಷಿ ಮೌಸಂ ಸೇವಾ (ಜಿಕೆಎಂಎಸ್)" ಯೋಜನೆಯಡಿಯಲ್ಲಿ ಸಲ್ಲಿಸುತ್ತಿದೆ ಇದರಿಂದ ದೇಶದ ಸಾಕಷ್ಟು ರೈತರು ಪ್ರಯೋಜನ ಪಡೆಯುತ್ತಿದ್ದಾರೆ ಎಂದು ತಿಳಿಸಿದರು. ಅಸ್ತಿತ್ವದಲ್ಲಿರುವ ಎಎಎಸ್ ವ್ಯವಸ್ಥೆಯ ಮುಖ್ಯ ಒತ್ತು, ಮಣ್ಣು ಮತ್ತು ಬೆಳೆ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಹವಾಮಾನ ಮುನ್ಸೂಚನೆಗಳೊಂದಿಗೆ ಸಂಯೋಜಿಸಿ ದೈನಂದಿನ ಕೃಷಿ ಕಾರ್ಯಾಚರಣೆಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲು ರೈತರಿಗೆ ಸಹಾಯ ಮಾಡುತ್ತದೆ, ಅಲ್ಲದೇ, ನಷ್ಟವನ್ನು ಕಡಿಮೆ ಮಾಡಲು ಮತ್ತು ಬೆಳೆ ಇಳುವರಿಯನ್ನು ಗರಿಷ್ಠಗೊಳಿಸಲು, ಮಳೆಯ ಕೊರತೆ ಮತ್ತು ಹವಾಮಾನ ವೈಪರೀತ್ಯದ ಸಂದರ್ಭದಲ್ಲಿ ಕೃಷಿ ಕ್ಷೇತ್ರದಲ್ಲಿ ಸಂಪನ್ಮೂಲಗಳ ಸದ್ಬಳಕೆಗೆ ಇದು ಸಹಕರಿಸುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯ ಬ್ಲಾಕ್ ಅಧಿಕಾರಿ ಸುಬ್ರಹ್ಮಣ್ಯ ನಾಯ್ಕ್ ಮತ್ತು ಶ್ರೀ ತುಳಸಿ ಮಹಿಳಾ ಸಂಜೀವಿನಿ ಒಕ್ಕೂಟದ 21 ಸದಸ್ಯರು ಉಪಸ್ಥಿತರಿದ್ದರು.





**ಮೂಡಬಿದಿರೆ ತಾಲೂಕಿನ ಶಿರ್ತಾಡಿ ಗ್ರಾಮದಲ್ಲಿ ಕಾರ್ಯಾಗಾರ ಏರ್ಪಡಿಸಿರುವುದು**



**ಪರಿಸರ ಸ್ನೇಹಿ ಜೀವನ ಶೈಲಿ: ಮಾಹಿತಿ ಕಾರ್ಯಕ್ರಮ**

ಪರಿಸರ ಸ್ನೇಹಿ ಜೀವನ ಶೈಲಿ ಕಾರ್ಯಕ್ರಮ ನಡೆಯಿತು.

ಶಿರ್ತಾಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದ ಕುರಿತು ಉದಯವಾಣಿ ಸ್ಥಳೀಯ ಪತ್ರಿಕೆಯಲ್ಲಿ ಸುದ್ದಿ ಪ್ರಸಾರ

ದಿನಾಂಕ 26.05.2023 ರಂದು ಕೆಳದಿ ಶಿವಪ್ಪನಾಯಕ ಕೃಷಿ ಹಾಗೂ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ವಿದ್ಯಾರ್ಥಿಗಳಿಗೆ ಪರಿಸರ ಸ್ನೇಹಿ ಜೀವನಶೈಲಿ: ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಡಾ. ಮಲ್ಲಿಕಾರ್ಜುನ ಎಲ್ ವಿಜ್ಞಾನಿ (ಮಣ್ಣು ವಿಜ್ಞಾನ) ಕಾರ್ಯಕ್ರಮವನ್ನು ಸಂಯೋಜಿಸಿ, ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿಯು ಪರಿಸರದಲ್ಲಿ ಹವಾಮಾನ ವೈಪರಿತ್ಯದಿಂದ ಉಂಟಾಗುವ ಹಾನಿಯನ್ನು ಮಿತಗೊಳಿಸುವ ಒಂದು ಮೂಲ ಪರಿಕಲ್ಪನೆಯಾಗಿದೆ ಎಂದು ತಿಳಿಸಿದರು. ಇದು ಕೃಷಿ ವ್ಯವಸ್ಥೆಯಲ್ಲಿ ಹವಾಮಾನ ವೈಪರೀತ್ಯದ ಬದಲಾವಣೆಗಳ ಪರಿಣಾಮಗಳಿಗನುಗುಣವಾಗಿ ಹೊಂದಿಕೊಳ್ಳುವ, ಹೀರಿಕೊಳ್ಳುವ ಮತ್ತು ಚೇತರಿಸಿಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ ಎಂದು ವಿವರಿಸಿದರು. ಇದಲ್ಲದೆ ಭೂಮಿಯ ಮೇಲೆ ವಾಸಿಸಲು ಉತ್ತಮ ವಾತಾವರಣವನ್ನು ಪಡೆಯಲು ಪರಿಸರ ಸ್ನೇಹಿ ಜೀವನಶೈಲಿಯ ಪ್ರಯೋಜನಗಳು ಮತ್ತು ಅಗತ್ಯತೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು. ಡಾ. ಕೇದಾರನಾಥ ವಿಜ್ಞಾನಿ– ಸಸ್ಯ ಸಂರಕ್ಷಣೆ, ಕೆವಿಕೆಯ ಸಿಬ್ಬಂದಿಗಳು, ಕೃಷಿ ಮಹಾವಿದ್ಯಾಲಯ, ಶಿವಮೊಗ್ಗದ 54 ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





**ಕೆವಿಕೆ, ದ.ಕ. ದಲ್ಲಿ ಜಾಗೃತಿ ಕಾರ್ಯಕ್ರಮ ಏರ್ಪಡಿಸಿರುವುದು**

ದಿನಾಂಕ 27.05.2023 ರಂದು ಬಂಟ್ವಾಳ ತಾಲೂಕಿನ ಪುಣಚ ಗ್ರಾಮದಲ್ಲಿ ಒಂದು ದಿನದ ಹೊರಾಂಗಣ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಪುಣಚ ಗ್ರಾಮ ಪಂಚಾಯತ್'ನ ಅಧ್ಯಕ್ಷರಾದ ರಾಮಕೃಷ್ಣ ಬಿ. ಅವರು ಈ ಕಾರ್ಯಗಾರದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮವನ್ನು ಸಂಯೋಜಿಸಿದ ಡಾ. ಮಲ್ಲಿಕಾರ್ಜುನ ಎಲ್ ವಿಜ್ಞಾನಿ (ಮಣ್ಣು ವಿಜ್ಞಾನ) ಅಸ್ತಿತ್ವದಲ್ಲಿರುವ ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನು, ಬೆಳೆ ಮತ್ತು ಜಾನುವಾರು ತ್ಯಾಜ್ಯಗಳನ್ನು ಬಳಸಿಕೊಂಡು ಸುಸ್ಥಿರವಾದ ಉತ್ಪಾದನಾ ವ್ಯವಸ್ಥೆಗಳ ಮೂಲಕ ಆಹಾರ ಭದ್ರತೆಯನ್ನು ಸಾಧಿಸಲು ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿ ಅಳವಡಿಕೆಯ ಅವಶ್ಯಕತೆಯ ಕುರಿತು ಮಾತನಾಡಿದರು. ಹವಾಮಾನ ವೈಪರೀತ್ಯಗಳ ಅಡಿಯಲ್ಲಿ ದೀರ್ಘಾವಧಿಯ ಹೆಚ್ಚಿನ ಉತ್ಪಾದಕತೆ ಮತ್ತು ಕೃಷಿ ಆದಾಯವನ್ನು ಸಾಧಿಸುವುದು. ದೈನಂದಿನ ಚಟುವಟಿಕೆಗಳಲ್ಲಿ ಪರಿಸರ ಸ್ನೇಹಿ ಜೀವನಶೈಲಿಯನ್ನು ಅನುಸರಿಸುವ ಮೂಲಕ ಉತ್ತಮ ಪರಿಸರ ಕಾಪಾಡಿಕೊಳ್ಳಲು ತಿಳಿಸಿದರು. ಮಣಿಪಾಲದ ಭಾರತೀಯ ವಿಕಾಸ ಟ್ರಸ್ಟ್‌ನ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ ಅವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಕಾರ್ಯಾಗಾರದಲ್ಲಿ ವಿಟ್ಲ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಎಸ್ ಕೆ ಸರಿಕರ್, ಪುಣಚ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವಿ ಹಾಗೂ ಉಜ್ವಲ್ ಸಂಜೀವಿನಿ ಒಕ್ಕೂಟದ 30 ಸದಸ್ಯರು ಉಪಸ್ಥಿತರಿದ್ದರು.



ಬಂಟ್ವಾಳ ತಾಲೂಕಿನ ಪುಣಚ ಗ್ರಾಮದಲ್ಲಿ ಕಾರ್ಯಾಗಾರ ಏರ್ಪಡಿಸಿರುವುದು

## ಕೆವಿಕೆ ಕಾರ್ಯಚಟುವಟಿಕೆಗಳ ಕುರಿತು ಜಾಗೃತಿ ಕಾರ್ಯಕ್ರಮ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ) ಮಂಗಳೂರು ದಿನಾಂಕ 26.05.2023 ರಂದು ಕೃಷಿ ವಿಜ್ಞಾನ ಕೇಂದ್ರದ ಕಾರ್ಯಚಟುವಟಿಕೆಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕೆವಿಕೆಯ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಟಿ. ಜೆ. ರಮೇಶ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ.ಕೇದಾರನಾಥ ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ರವರು ಕಾರ್ಯಕ್ರಮವನ್ನು ಸಂಯೋಜಿಸಿ ವಿದ್ಯಾರ್ಥಿಗಳಿಗೆ ರೈತರ ಆದಾಯ ಹಾಗೂ ಉತ್ಪಾದನೆ ದ್ವಿಗುಣಗೊಳಿಸುವಲ್ಲಿ ಸಸ್ಯ ಆರೋಗ್ಯ ನಿರ್ವಹಣೆಯ ಮಹತ್ವದ ಕುರಿತು ವಿವರಿಸಿದರು. ಕೃಷಿ ವಿದ್ಯಾಲಯ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಇರುವಕ್ಕಿಯ 51 ವಿದ್ಯಾರ್ಥಿಗಳು ಮತ್ತು ಸಹಾಯಕ ಪ್ರಾಧ್ಯಾಪಕರು ಭಾಗವಹಿಸಿದ್ದರು.




ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು

ಭಾ. ಕೃ. ಅ.ಪ.–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಕೃಷಿ ಇಲಾಖೆ, ಆತ್ಮ ಯೋಜನೆ, ದಕ್ಷಿಣ ಕನ್ನಡ ಇವರ ಸಹಯೋಗದಲ್ಲಿ ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 31–05–2023 ರಂದು ರೈತ ಸಂಪರ್ಕ ಕೇಂದ್ರ, ವೇಣೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀ. ಚಿದಾನಂದ ಹುಗಾರ್, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ವೇಣೂರು ರವರು ಉದ್ಘಾಟಿಸಿ ರೈತರಿಗೆ ಕಾರ್ಯಕ್ರಮದ ಸದುಪಯೋಗ ಪಡೆಯಬೇಕೆಂದು ತಿಳಿಸಿದರು. ಡಾ. ರಶ್ಮಿ ಆರ್ ವಿಜ್ಞಾನಿಗಳು, ತೋಟಗಾರಿಕೆ, ಕೆವಿಕೆ ಮಂಗಳೂರುರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ದಕ್ಷಿಣ ಕನ್ನಡದಲ್ಲಿ ಬೆಳೆಯುವ ಪ್ರಮುಖ ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು ಮತ್ತು ಅವುಗಳ ಸಸ್ಯಾಭಿವೃದ್ಧಿಯ ಕುರಿತು ಮಾಹಿತಿ ನೀಡಿದರು. ಶ್ರೀಮತಿ ರಶ್ಮಿ ಕುಲಾಲ್, ಜಿಲ್ಲಾ ಯೋಜನಾ ನಿರ್ದೇಶಕರು ಆತ್ಮ ಯೋಜನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾರನ್ನು ಸ್ವಾಗತಿಸಿದರು. 25 ರೈತರು ಮತ್ತು ಆತ್ಮ ಯೋಜನೆಯ ಸಿಬ್ಬಂದಿ ಭಾಗವಹಿಸಿದ್ದರು.



## ವಿಶ್ವ ಪರಿಸರ ದಿನ : ಪ್ಲಾಸ್ಟಿಕ ಮಾಲಿನ್ಯ ನಿರ್ಮೂಲನೆ

ವಿಶ್ವ ಪರಿಸರ ದಿನವನ್ನು ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ) ಮಂಗಳೂರು ದಿನಾಂಕ 05.06.2023 ರಂದು ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರ ಎಂಬ ಅಭಿಯಾನದ ಅಡಿಯಲ್ಲಿ ಆಚರಿಸಲಾಯಿತು. ಡಾ. ಟಿ. ಜೆ. ರಮೇಶ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಭಾ.ಕೃ.ಅ.ಪ–ಕೆವಿಕೆ (ದ.ಕ) ಮಂಗಳೂರು ಅಧ್ಯಕ್ಷತೆಯನ್ನು ವಹಿಸಿದ್ದರು. ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಸಿದ್ದರಾಜು ಭಾಗವಹಿಸಿ ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟುವ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಡಾ.ಕೇದಾರನಾಥ ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ಭಾ.ಕೃ.ಅ.ಪ– ಕೆವಿಕೆ (ದ.ಕ) ಮಂಗಳೂರು ಕಾರ್ಯಕ್ರಮವನ್ನು ಸಂಯೋಜಿಸಿದರು. ಈ ಉಪನ್ಯಾಸ ಮತ್ತು ಮರ ನೆಡುವ ಕಾರ್ಯಕ್ರಮದಲ್ಲಿ ಒಟ್ಟು 28 ವಿದ್ಯಾರ್ಥಿಗಳು ಭಾಗವಹಿಸಿದ್ದರು.







## ಪರಿಸರ ದಿನಾಚರಣೆ ಕಾರ್ಯಕ್ರಮ

ಕೃಷಿ ಇಲಾಖೆ, ಆತ್ಮ ಯೋಜನೆ, ದಕ್ಷಿಣ ಕನ್ನಡ ರವರು ದಿನಾಂಕ: 05–06–2023 ರಂದು ಕೊಂಚಾಡಿಯ ಶ್ರೀ ರವಿಶಂಕರ್ ವಿದ್ಯಾಮಂದಿರದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ರಶ್ಮಿ ಆರ್., ವಿಜ್ಞಾನಿ (ತೋಟಗಾರಿಕೆ), ಐಸಿಎಆರ್–ಕೆವಿಕೆ, ದಕ್ಷಿಣ ಕನ್ನಡ. ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಪರಿಸರ ದಿನಾಚರಣೆಯ ಅಂಗವಾಗಿ ಶಾಲಾ ಮಕ್ಕಳ ಅನುಕೂಲಕ್ಕಾಗಿ ಕೈತೋಟ ಮತ್ತು ತಾರಸಿ ತೋಟದ ಬಗ್ಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾ. ರಶ್ಮಿ ಆರ್. ಅವರು ಕೈತೋಟ ಮತ್ತು ತಾರಸಿ ತೋಟ ಯೋಜನೆ, ವಿನ್ಯಾಸ ಮತ್ತು ಸ್ಥಾಪನೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ರಶ್ಮಿ ಕುಲಾಲ್, ಜಿಲ್ಲಾ ಯೋಜನಾ ನಿರ್ದೇಶಕರು ಆತ್ಮ ಯೋಜನೆ, ಆತ್ಮ ಯೋಜನೆಯ ಸಿಬ್ಬಂದಿ, 435 ವಿದ್ಯಾರ್ಥಿಗಳು ಹಾಗೂ ಶಾಲೆಯ ಶಿಕ್ಷಕರು ಭಾಗವಹಿಸಿದ್ದರು.




## ರಾಷ್ಟ್ರಮಟ್ಟದ ವಿಚಾರ ಸಂಕಿರಣದ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವಿಕೆ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ಕೆ.ವಿ.ಎ.ಎಫ್.ಎಸ್.ಯು, ದಕ್ಷಿಣ ಕನ್ನಡ, ಮಂಗಳೂರು ಇವರು, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಹಾಗೂ ಭಾರತೀಯ ವಿಸ್ತರಣಾ ಶಿಕ್ಷಣ ಸಂಘ, ನವದೆಹಲಿ ಇವರ ಸಂಯುಕ್ತಾಶ್ರಯದಲ್ಲಿ, ಡಾ, ಬಾಬು ರಾಜೇಂದ್ರ ಪ್ರಸಾದ್, ಅಂತರಾಷ್ಟ್ರೀಯ ಸಭಾಂಗಣ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಇಲ್ಲಿ ದಿನಾಂಕ:22.06.2023 ರಿಂದ ದಿನಾಂಕ: 24.06.2023 ರವರೆಗೆ ನಡೆದ ಮೂರು ದಿವಸಗಳ “Evolving Extension Science Towards Secondary Agriculture for Sustainable Development” ಎಂಬ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಲಾಯಿತು ಹಾಗೂ ವಸ್ತು ಪ್ರದರ್ಶನ ಮಳಿಗೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶಿಸಲಾಯಿತು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು (ಪಶುವೈದ್ಯಕೀಯ), ವಸ್ತು ಪ್ರದರ್ಶನ ಮಳಿಗೆಯ ಸಂಯೋಜಕರಾಗಿದ್ದು, ಡಾ. ಟಿ. ಜೆ. ರಮೇಶ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಹಾಗೂ ಡಾ. ಚೇತನ್, ಎನ್, ವಿಜ್ಞಾನಿಗಳು (ಮೀನುಗಾರಿಕೆ) ಕೃಷಿ ವಿಜ್ಞಾನ ಕೇಂದ್ರ ದಕ್ಷಿಣ ಕನ್ನಡ, ಮಂಗಳೂರು ರವರು ಭಾಗವಹಿಸಿದ್ದರು. ಮೂರು ದಿನಗಳ ಈ ವಿಚಾರ ಸಂಕಿರಣದಲ್ಲಿ ಸುಮಾರು 400 ಕ್ಕೂ ಹೆಚ್ಚು ಶಿಭಿರಾರ್ಥಿಗಳು ನಮ್ಮ ಕೇಂದ್ರದ ವಸ್ತು ಪ್ರದರ್ಶನ ಮಳಿಗೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿರುತ್ತಾರೆ.







## ರೈತ – ವಿಜ್ಞಾನಿಗಳ ಸಂವಾದ ಕಾರ್ಯಕ್ರಮ

ಭಾರತೀಯ ಕಿಸಾನ್ ಸಂಘ ಮೂಡಬಿದಿರೆ ಹಾಗೂ ತೋಟಗಾರಿಕೆ ಇಲಾಖೆ ಮಂಗಳೂರು ಸಹಯೋಗದಲ್ಲಿ ಮುಂಗಾರಿನಲ್ಲಿ ತೋಟಗಾರಿಕೆ ಬೆಳೆಗಳ ನಿರ್ವಹಣೆ ಕುರಿತು ರೈತ ವಿಜ್ಞಾನಿಗಳ ಸಂವಾದ ಕಾರ್ಯಕ್ರಮವನ್ನು ದಿನಾಂಕ 24.06.2023 ರಂದು ಶ್ಯಾಮಲಿ ಎನ್ಕ್ಲೇವ್ ಮೂಡಬಿದಿರೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ನಾರಾಯಣ ಸ್ವಾಮಿ ಯವರು ಉದ್ಘಾಟಿಸಿದರು ಹಾಗೂ ಶ್ರೀ ಉಮಾನಾಥ ಕೋಟ್ಯಾನ್ ವಿಧಾನಸಭಾ ಸದಸ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಡಾ.ಕೇದಾರನಾಥ ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ಭಾ.ಕೃ.ಅ.ಪ– ಕೆವಿಕೆ (ದ.ಕ) ಮಂಗಳೂರು ರವರು ತೋಟಗಾರಿಕೆ ಬೆಳೆಗಳ ಸುಧಾರಿತ ಪದ್ಧತಿಗಳ ಕುರಿತು ಮಾಹಿತಿಯನ್ನು ನೀಡಿದರು. ಒಟ್ಟು 226 ಕೃಷಿಕರು ಭಾಗವಹಿಸಿದರು.














| | | |
|---|---|---|
| ಸಂಪಾದಕರು | : | ಡಾ. ಟಿ. ಜೆ. ರಮೇಶ |
| ಸಹ ಸಂಪಾದಕರು | : | ಡಾ. ಶಿವಕುಮಾರ್ ಆರ್. |
| ಸಹಾಯಕ ಸಂಪಾದಕರು | : | ಡಾ. ಚೇತನ್ ಎನ್.<br>ಡಾ. ಕೇದಾರನಾಥ.<br>ಡಾ. ನವೀನ್ ಕುಮಾರ್ ಬಿ. ಟಿ.<br>ಡಾ. ಮಲ್ಲಿಕಾರ್ಜುನ ಎಲ್.<br>ಡಾ. ರಶ್ಮಿ ಆರ್. |
| ಸಲಹೆ ಮತ್ತು ಮಾರ್ಗದರ್ಶನ | : | ಡಾ. ಎನ್. ಎ. ಪಾಟೀಲ್ |
| ಪುಟ ವಿನ್ಯಾಸ | : | ಶ್ರೀ ಸತೀಶ ನಾಯ್ಕ ಕೆ. |
| ಪ್ರಕಾಶಕರು | : | ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು<br>ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ,<br>ಮಂಗಳೂರು – 576102 |



ಭಾ.ಕೃ.ಅ.ಪ.–ಕೆ.ವಿ.ಕೆ.ದ.ಕ., ಮಂಗಳೂರು ದೂ.ಸಂಖ್ಯೆ : 0824–2431872,
ಮಿಂಚಂಚೆ : kvk.DakshinaKannada@icar.gov.in ವೆಬ್‌ಸೈಟ್:kvkdk.org



हर कदम, हर डगर
किसानों का हमसफर
भारतीय कृषि अनुसंधान परिषद
Agresearch with a human touch